488

-: ಹಾಸನ ಜಿಲ್ಲಾ ದಂಡಾಧಿಕಾರಿಗಳ ಕಛೇರಿಯ ನಡವಳಿಕೆಗಳು :-

ವಿಷಯ :- ಸಾರ್ವತ್ರಿಕ ಲೋಕಸಭಾ ಚುನಾವಣೆ 1996 — ಮದ್ಯ ಶೇಖರಣೆ, ಸಾಗಾಣಿಕೆ ಮತ್ತು ಮಾರಾಟವನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ :- 1) ಮುಖ್ಯ ಚುನಾವಣಾಧಿಕಾರಿಗಳ ಪತ್ರದ ಸಂಖ್ಯೆ: ಡಿಪಿಎಆರ್ 1 ಚುಮನಿ 96, ದಿನಾಂಕ: 16-02-1996.

2) ಅಬ್ಕಾರಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಸುತ್ತೋಲೆ ಇಸಿಇ 12 ಎಲ್‌ಸಿ 96, ದಿನಾಂಕ: 09-04-1996.

oooooo

ಪ್ರಸ್ತಾವನೆ :-

1996ರ ಸಾರ್ವತ್ರಿಕ ಲೋಕಸಭಾ ಚುನಾವಣೆಯ ಪ್ರಯುಕ್ತ ಹಾಸನ ಜಿಲ್ಲೆಯಲ್ಲಿ ದಿನಾಂಕ 27-04-1996 ರಂದು ಮತದಾನ ನಡೆಯಲಿದೆ. ದಿನಾಂಕ: 08-05-96ರಂದು ಮತಗಳ ಎಣಿಕೆ ಕಾರ್ಯ ನಡೆಯಲಿದೆ. ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಮತದಾನದ ಹಿಂದಿನ 2 ದಿನ ಮತದಾನದ ದಿನ ಮತ್ತು ಮತಗಳ ಎಣಿಕೆಯ ದಿನದ ಹಿಂದಿನ ದಿನ, ಎಣಿಕೆಯ ದಿನಗಳಂದು ಮದ್ಯ ಶೇಖರಣೆ, ಸಾಗಾಣಿಕೆ ಮತ್ತು ಮಾರಾಟವನ್ನು ನಿಷೇಧಿಸಬೇಕೆಂದು ಮುಖ್ಯ ಚುನಾವಣಾ ಕಮೀಷನರ ರವರು ತಿಳಿಸಿರುತ್ತಾರೆ. ಅದರಂತೆ ಈ ಜಿಲ್ಲೆಯಾದ್ಯಂತ ಮೇಲ್ಕಂಡ ದಿನಗಳಂದು ಮದ್ಯ ಶೇಖರಣೆ, ವಿತರಣೆ, ಸಾಗಾಣಿಕೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸುವುದು ಅತ್ಯಗತ್ಯವಾಗಿರುತ್ತದೆಂದು ಮನವರಿಕೆಯಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ: ಎಂಎಜಿ 692: 96-96, ದಿನಾಂಕ: 19-04-1996.

ಕರ್ನಾಟಕ ಅಬ್ಕಾರಿ ಪರವಾನಗಿ (ಸಾಮಾನ್ಯ ಸ್ಥಿತಿಗಳು) ನಿಯಮ 1967ರ 10ಬಿ ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀ ಮಹೇಂದ್ರ ಜೈನ್, ಐ.ಎ.ಎಸ್., ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ ಆದ ನಾನು ದಿನಾಂಕ: 24-04-96ರ ಮಧ್ಯರಾತ್ರಿ 12-00 ಗಂಟೆಯಿಂದ 27-04-1996ರ ಮಧ್ಯರಾತ್ರಿ 12-00 ಗಂಟೆಯವರೆಗೆ ಮತ್ತು ದಿನಾಂಕ: 06-05-96 ರ ಮಧ್ಯರಾತ್ರಿ 12-00 ಗಂಟೆಯಿಂದ ದಿನಾಂಕ: 09-05-1996ರ ಮಧ್ಯರಾತ್ರಿ 12-00 ಗಂಟೆಯ ವರೆಗೆ ಹಾಸನ ಜಿಲ್ಲೆಯಾದ್ಯಂತ ಮದ್ಯ ಶೇಖರಣೆ, ಸಾಗಾಣಿಕೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಿರುತ್ತೇನೆ. ಮೇಲ್ಕಂಡ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಜಾರಿಯಲ್ಲಿರುವ ಅಬ್ಕಾರಿ ನಿಯಮಗಳ ರೀತ್ಯ ಕ್ರಮ ಕೈಗೊಳ್ಳಲಾಗುವುದು.

ದಿನಾಂಕ: 19-04-1996 ರಂದು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ಹೊರಡಿಸಲಾಗಿದೆ.

(ಮಹೇಂದ್ರ ಜೈನ್),
ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :-

1) ಅಬ್ಕಾರಿ ಉಪ ಆಯುಕ್ತರು, ಹಾಸನ ಜಿಲ್ಲೆ, ಹಾಸನ.
2) ಅಬ್ಕಾರಿ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ.
3) ಅಬ್ಕಾರಿ ಉಪ ಕಮೀಷನರ್ (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು.
4) ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ.
5) ಉಪ ವಿಭಾಗಾಧಿಕಾರಿಗಳು, ಹಾಸನ ಮತ್ತು ಸಕಲೇಶಪುರ ಉಪ ವಿಭಾಗ.
6) ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರರುಗಳಿಗೆ.
7) ಅಬ್ಕಾರಿ ಉಪ ಅಧೀಕ್ಷಕರು, ಇ.ಐ.ಬಿ. ಹಾಸನ ಉಪವಿಭಾಗ, ಮೈ ಷುಗರ್ ಕಂ. ಸಾ.ಸಾ. ಘಟಕ, ಹಾಸನ.
8) ಆರಕ್ಷಕ ಉಪ ಅಧೀಕ್ಷಕರು, ಹಾಸನ, ಅರಸೀಕೆರೆ ಮತ್ತು ಹೊಳೆನರಸೀಪುರ.
9) ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಹಾಸನ, ಅರಸೀಕೆರೆ, ಸಕಲೇಶಪುರ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ.
10) ಜಿಲ್ಲೆಯ ಎಲ್ಲಾ ಪೋಲೀಸ್ ಠಾಣೆಯ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳಿಗೆ.
11) ಜಿಲ್ಲೆಯ ಎಲ್ಲಾ ಅಬ್ಕಾರಿ ವಲಯದ ಅಬ್ಕಾರಿ ನಿರೀಕ್ಷಕರು ಮತ್ತು ಉಪ ವಲಯದ ಉಪ ನಿರೀಕ್ಷಕರುಗಳಿಗೆ.
12) ಅಬ್ಕಾರಿ ಆಯುಕ್ತರು, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
13) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಹಾಸನ.